**Crl. Misc. No. 129/2024** **RW - 1**

ದಿನಾಂಕಃ **30.08.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ.ಬಿ.ಎಸ್. ಪಿ ವಕೀಲರಿಂದಃ

ನಾನು ನನ್ನ ಹೆಂಡತಿ ಕೊಡವ ಜನಾಂಗಕ್ಕೆ ಸೇರಿದ್ದು, ಹಿರಿಯರ ಒಪ್ಪಿಗೆಯಂತೆ ಮದುವೆ ಆಗಿರುತ್ತೇವೆ. ನಮ್ಮ ಊರಿನವರೇ ಮದುವೆಯಾಗಲೂ ನನ್ನ ಹೆಂಡತಿಯ ವಿವರಗಳು ಕೊಟ್ಟಿರುತ್ತಾರೆ. ಇವರು ದೂರದ ಸಂಬಂಧಿ ಎಂದರೆ ಸರಿಯಲ್ಲ. ಮದುವೆ ಮುನ್ನ 7 ತಿಂಗಳ ಹಿಂದೆ ನಿಶ್ಚಿತಾರ್ಥ ಆಗಿರುತ್ತದೆ, ನಿಶ್ಚಿತಾರ್ಥದ ನಂತರ ನಾವಿಬ್ಬರೂ ಮಾತನಾಡಿಕೊಳ್ಳುತ್ತಿದ್ದೆವು. ನನ್ನ ಹೆಂಡತಿಯ ವಯಸ್ಸು ನನಗೆ ಮುನ್ನವೇ ಗೊತ್ತಿತ್ತು ಎಂದರೆ ಸರಿಯಲ್ಲ. ಹೈಸೂಡ್ಲೂರಿನಲ್ಲಿರುವ ಆಸ್ತಿಗಳು ಮೂಲತಃ ಪಿತ್ರಾರ್ಜಿತ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಅವರ 1975 ರಿಂದ 1980 ರ ಒಳಗೆಡ ಅಣ್ಣ ತಮ್ಮಂದಿರ ನಡುವೆ ಆದ ನೊಂದಾಯಿತ ವಿಭಾಗದಲ್ಲಿ 14 ಎಕರೆ ಬಂದಿರುತ್ತದೆ. ವಿಭಾಗಪತ್ರ ನಾನು ಓದಿರುತ್ತೇನೆ. ಈ 14 ಎಕರೆಯನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು. ನಮ್ಮ ಈ ತೋಟಕ್ಕೆ ನೀರಿನ ವ್ಯವಸ್ಥೆ ಇದೆ. ನಮಗೆ ವ್ಯವಸಾಯಕ್ಕೆ ಬೇಕಾದ ವಾಹನಗಳು, ಸಲಕರಣೆಗಳು ಮತ್ತು ನಮಗೆ ಓಡಾಡಲು ವಾಹನಗಳು ಮತ್ತು ಗೋಡಾನ್ ಮತ್ತು ಮನೆ ಇದೆ. ಅದೇ ರೀತಿ ಲೈನ್ ಮನೆಗಳು ಇವೆ.

ನನ್ನ ತಂದೆಗೆ ಕೃಷಿ ಆದಾಯವೇ ಮೂಲ ಆಧಾರ, ಮುಂದುವರೆದು ನನ್ನ ತಂದೆ 1976 ರವರೆಗೂ Consolidated coffee ಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ತಂದೆ ಈ ತೋಟ ನೋಡಿಕೊಳ್ಳಲು ಆ ಕೆಲಸವನ್ನು ಬಿಟ್ಟಿರುತ್ತಾರೆ. ನನ್ನ ತಂದೆ ಯಾವ ಸರ್ವೆ ನಂಬರ್ ಆಸ್ತಿಗಳನ್ನು ಖರೀದಿಸಿದರೂ ನನಗೆ ಗೊತ್ತಿಲ್ಲ. 14 ಎಕರೆ ಜೊತೆಗೆ ಈ ಖರೀದಿಸಿದ ಆಸ್ತಿಯನ್ನು ಒಳಗೊಂಡಂತೆ ಈ ನಮ್ಮ ಕುಟುಂಬದಲ್ಲಿ ವಿಭಾಗ 2024 ರಲ್ಲಿ ಆಗಿರುತ್ತದೆ, ಮುಂದುವರೆದು 2010 ರಲ್ಲಿ ನಮ್ಮ ಕುಟುಂಬದಲ್ಲಿ ಮೌಖಿಕ ವಿಭಾಗವಾಗಿರುತ್ತದೆ. ಕಂದಾಯ ದಾಖಲೆಗಳು ಮೌಖಿಕ ವಿಭಾಗದಂತೆ ಆಗಿರುವುದಿಲ್ಲ. 2024 ರ ವಿಭಾಗ ಪತ್ರದಲ್ಲಿ ಒಟ್ಟು 35 ಎಕರೆ ವಿಭಾಗವಾಗಿದೆ ಎಂದರೆ ಇರಬಹುದು.

ನನಗೆ ವಿಭಾಗಪತ್ರದಂತೆ ಡಿ ಶೆಡ್ಯೂಲ್ 9 ಎಕರೆ ಕಾಫಿ ತೋಟ ಮತ್ತು ಒಂದು ಭಾಗದ ಮನೆ ಬಂದಿದೆ ಎಂದರೆ ಸರಿಯಲ್ಲ. ಈ ವಿಭಾಗ ದಾಖಲೆಯಂತೆ ನನಗೆ 8 ಎಕರೆ ಗದ್ದೆ ಮತ್ತು ಕಾಫಿ ತೋಟ ಬಂದಿರುತ್ತದೆ, ಈ ದಾಖಲೆಯಂತೆ ಕಂದಾಯ ದಾಖಲೆ ಆಗಿರುತ್ತದೆ. ಈ 8 ಎಕರೆ ಕಾಫಿ ತೋಟ ಮತ್ತು ಗದ್ದೆ ನನ್ನ Assets and liabilities ನಲ್ಲಿ ತೋರಿಸಿದ್ದೇನೆ. ನನ್ನ ಹೆಸರಿನಲ್ಲಿ Bolero Jeep, Himalaya Motor Bike ಇದೆ. ಈ ವಾಹನಗಳ ಬಗ್ಗೆ Assets and liabilities ನಲ್ಲಿ ತೋರಿಸಿರುವ ಬಗ್ಗೆ ನನಗೆ ನೆನಪಿಲ್ಲ. ವಾಹನಗಳು ಇದ್ದ ಬಗ್ಗೆ ನನ್ನ ವಕೀಲರಿಗೆ ಹೇಳಿರುತ್ತೇನೆ.

ನಮ್ಮ ಮನೆಯಿಂದ ಮುಖ್ಯ ರಸ್ತೆ ಸಿಗುತ್ತದೆ, ಇಲ್ಲಿ ಶಾಲಾ ವಾಹನಗಳು ಈ ರಸ್ತೆಯಲ್ಲಿ ಓಡಾಡುತ್ತವೆ ಎಂದರೆ ಸರಿಯಲ್ಲ. ನನ್ನ ಮಕ್ಕಳು ಮೊದಲಿನಿಂದ ಲಯನ್ಸ್ ಶಾಲೆ ಗೋಣಿಕೊಪ್ಪದಲ್ಲಿ ಓದುತ್ತಿದ್ದಾರೆ ಎಂದರೆ ಸರಿ. ಹೈಸೂಡ್ಲೂರಿನಿಂದ ಮಗ 6 ನೇ ತರಗತಿವರೆಗೂ ಮತ್ತು ಮಗಳು 1 ನೇ ತರಗತಿವರೆಗೂ ಆ ಶಾಲೆಗೆ ಹೋಗುತ್ತಿದರು. ಈಗ ಗೋಣಿಕೊಪ್ಪದಲ್ಲಿ ಮಕ್ಕಳಿಗೆ ಮಾತ್ರ ಮನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ ಅವರ ಜೊತೆ ನಾನು ಗೋಣಿಕೊಪ್ಪದಲ್ಲಿದ್ದೇನೆ. ನನ್ನ ಅಕ್ಕನನ್ನು ಬೀರುಗ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿರುತ್ತೇವೆ. ನನ್ನ ಅಕ್ಕನ ಮಕ್ಕಳು ಇದೇ ಶಾಲೆಯಲ್ಲಿ ಓದುತ್ತಿದ್ದಾರೆ. ಇವರ ಮಕ್ಕಳು ಬೀರುಗದಿಂದ ಟಿ ಶೆಟ್ಟಿಗೇರಿ, ಹುದಿಕೇರಿ ಮಾರ್ಗವಾಗಿ ಹೋಗುತ್ತಾರೆ ಎಂದರೆ ಸರಿಯಲ್ಲ, ಅವರು ಖಾಸಗಿ ವಾಹನದಲ್ಲಿ ಹೋಗುತ್ತಾರೆ.

ನನಗೆ ಅಜು ಚಂಗಪ್ಪನವರ ಹೆಂಡತಿ ಸುಷ್ಮಾರವರು 3 ತಿಂಗಳಿಂದ ಗೊತ್ತು. ಅವರು ವಿಚ್ಛೇದನೆ ಪಡೆದಿದ್ದಾರೆ ಎಂದರೆ ಗೊತ್ತಿಲ್ಲ. ಅವರಿಗೆ ಇಬ್ಬರು ಮಕ್ಕಳು ಇದ್ದಾರೆ ಎಂದರೆ ಸರಿ. ಇವರ ಮಕ್ಕಳು ಲಯನ್ಸ್ ಶಾಲೆಯಲ್ಲಿ ಓದುತ್ತಿದ್ದಾರೆ ಎಂದರೆ ಸರಿಯಲ್ಲ. ಈ ಸುಷ್ಮಾರವರು ನಾನು ಈಗ ಗೋಣಿಕೊಪ್ಪದಲ್ಲಿರುವ ನಮ್ಮ ಮನೆಯ ಮೇಲೆ ಬಾಡಿಗೆಗೆ ಇದ್ದಾರೆ. ನನ್ನ ತಂದೆ 2023 ರಲ್ಲಿ ಗೋಣಿಕೊಪ್ಪದಲ್ಲಿರುವ ಮನೆ ಖರೀದಿಸಿದ್ದರು. ನಾನು

**Crl. Misc. No. 129/2024** **RW - 1**

ಈ ಸುಷ್ಮಾರವರ ಜೊತೆ Live – in relationship ನಲ್ಲಿ ಇದ್ದೇನೆ ಎಂದರೆ ಸರಿಯಲ್ಲ. ನಾನು ಗೋಣಿಕೊಪ್ಪದಲ್ಲಿ ರಾತ್ರಿ ಇದ್ದು ಬೆಳಿಗ್ಗೆ ಹೈಸೂಡ್ಲೂರಿಗೆ ಹೋಗುತ್ತೇನೆ ಎಂದರೆ ಸರಿ. ಅರ್ಜಿದಾರಳು ಹಾಗೂ ನನ್ನ ತಂದೆ ತಾಯಿ ಹೈಸೂಡ್ಲೂರಿನಲ್ಲಿ ಒಂದೇ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಅರ್ಜಿದಾರಳನ್ನು ನಮ್ಮ ಮನೆಯಿಂದ ಆಚೆ ಹಾಕುವ ಉದ್ದೇಶದಿಂದ ಮತ್ತು ತಾಯಿ ಮಕ್ಕಳನ್ನು ಬೇರೆ ಮಾಡುವ ಉದ್ದೇಶದಿಂದ ಮಕ್ಕಳನ್ನು ನಾನು ಗೋಣಿಕೊಪ್ಪ ಮನೆಯಲ್ಲಿ ಇಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಕ್ಕಳನ್ನು ತಾಯಿಯ ಜೊತೆ ಬೆರೆಯಲು ಬಿಡುತ್ತಿಲ್ಲ ಮತ್ತು ಮಕ್ಕಳಿಗೆ ತಾಯಿಯ ಜೊತೆ ಹೋಗಬೇಡ ಎಂದು ಕೂಡ ಮನ ತುಂಬಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ವಿಚ್ಛೇದನೆಕ್ಕೆ ಅರ್ಜಿ ಕೊಟ್ಟಿದ್ದೇನೆ ಎಂದರೆ ಸರಿ. ಈ ಜೀವನಾಂಶದ ಅರ್ಜಿಗೆ ಮುಂಚೆ ವಿಚ್ಛೇದನಾ ಅರ್ಜಿ ಕೊಟ್ಟಿರುತ್ತೇನೆ ಎಂದರೆ ಸರಿ.

<u>ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಲಾಗಿ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/-**
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.